ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

40

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಸಭೆ (ಅಧಿವೇಶನ)

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 6/3/2021

# ಒಂದೇ ಚುನಾವಣೆ ಚರ್ಚೆಗೆ ಬಲಿಪೂಜೆ?

## ಎರಡು ದಿನಗಳ ವಿಶೇಷ ಕಲಾಪದ ಶೂನ್ಯ ಸಂಪಾದನೆ

6/3/21

ವಿಧಾನಸಭೆ: ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವ ಕುರಿತು ಚರ್ಚೆಗೆ ಕರೆಯಲಾದ ಎರಡು ದಿನಗಳ ವಿಶೇಷ ಅಧಿವೇಶನ ಧರಣಿಗೆ ಆಹುತಿಯಾಯಿತು. ಈ ಚರ್ಚೆಯಲ್ಲಿ ಭಾಗಿಯಾಗಲು ನಿರಾಕರಿಸಿ, ಗುರುವಾರ ಮತ್ತು ಶುಕ್ರವಾರ ಬಾವಿಗೆ ಇಳಿದು ಧರಣಿ ನಡೆಸಿದ ಕಾಂಗ್ರೆಸ್ ಪಕ್ಷ ಕಲಾಪ ನಡೆಯಲು ಅವಕಾಶ ನೀಡಲಿಲ್ಲ.



ಹೀಗಾಗಿ ಈ ವಿಷಯದ ಕುರಿತು ಎರಡು ದಿನ ಸುದೀರ್ಘ ಚರ್ಚೆ ನಡೆಸಿ, ಕರ್ನಾಟಕ ವಿಧಾನಸಭೆಯ ನಿರ್ಣಯವನ್ನು ಕೇಂದ್ರಕ್ಕೆ ಕಳಿಸುವ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿಯವರ ಉದ್ದೇಶ ಈಡೇರಲಿಲ್ಲ. ಶುಕ್ರವಾರ ಧರಣಿಯ ಸಂದರ್ಭ ಬಾವಿಯಲ್ಲಿದ್ದ ಕಾಂಗ್ರೆಸ್‌ನವರು ಆರ್‌ಎಸ್‌ಎಸ್ ವಿರುದ್ಧ ಘೋಷಣೆಗಳನ್ನು ಕೂಗಿದ್ದರಿಂದ ಸ್ವತಃ ಸ್ಪೀಕರ್ ಕಾಗೇರಿಯವರು ಆಕ್ರೋಶಗೊಂಡರು. ಇಲ್ಲಿ ಆರ್‌ಎಸ್‌ಎಸ್‌ಅನ್ನು ಏಕೆ ತರುತ್ತೀರಿ ಎಂದು ಅವರು ಕೇಳಿದರು. ಎಲ್ಲರ ಒಪ್ಪಿಗೆ ಮೇಲೆ ಈ ವಿಷಯದ ಬಗ್ಗೆ ಚರ್ಚೆ ಕೈಗೆತ್ತಿಕೊಂಡು ವಿಶೇಷ ಅಧಿವೇಶನವನ್ನು ಕರೆದಿದ್ದೆ. ಆದರೆ ನೀವು ಗುರುವಾರ ಬೆಳಗ್ಗೆಯಿಂದ ಇದಕ್ಕೆ ಅಡ್ಡಿ ಪಡಿಸುತ್ತಿರುವುದು ಸರಿಯಲ್ಲ ಎಂದು ಸ್ಪೀಕರ್ ಹೇಳಿದರು. ಈ ಮಾತಿಗೆ ಪ್ರತಿಯಾಗಿ ಕಾಂಗ್ರೆಸ್ ಇನ್ನೂ ಜೋರಾಗಿ ಘೋಷಣೆಗಳನ್ನು ಕೂಗಲಾರಂಭಿಸಿತು.

ಈ ಸನ್ನಿವೇಶದಲ್ಲಿ ಸದನ ಮುಂದೂಡುವುದನ್ನು ಹೊರತುಪಡಿಸಿ ಬೇರೆ ದಾರಿ ಇರಲಿಲ್ಲ. ಹೀಗಾಗಿ 'ಬಜೆಟ್ ಮುಗಿಯುವುದರ ಒಳಗೆ ವಿಪಕ್ಷದ ಮನವೊಲಿಸಿ ಈ ಚರ್ಚೆಯನ್ನು ಕೈಗೆತ್ತಿಕೊಳ್ಳಲು ಯತ್ನ ಮಾಡುವೆ' ಎಂದು ಪ್ರಕಟಿಸಿದ ಸ್ಪೀಕರ್, ಸದನವನ್ನು ಮಾರ್ಚ್ 8ನೇ ತಾರೀಖಿಗೆ ಮುಂದೂಡಿದರು.

ಮೊದಲು ಚರ್ಚೆಗೆ ಒಪ್ಪಿದ್ದ ವಿಪಕ್ಷ ಗುರುವಾರ ಬೆಳಗ್ಗೆ ತಂತ್ರಗಾರಿಕೆ ಬದಲಿಸಿತು. ಈ ವಿಶೇಷ ಚರ್ಚೆ ವಿರೋಧಿಸಲು ತೀರ್ಮಾನಿಸಿತು. ಈ ತಂತ್ರಗಾರಿಕೆ ಅನ್ವಯ ಎರಡೂ ದಿನ ಕಲಾಪ ನಡೆಯಲು ಕಾಂಗ್ರೆಸ್ ಅವಕಾಶ ನೀಡದೇ ಬಾವಿಗಿಳಿದು ಧರಣಿ ಆರಂಭಿಸಿತು.

ಇದಕ್ಕೂ ಮೊದಲು ಶುಕ್ರವಾರ ಬೆಳಗ್ಗಿನ ಬೆಳವಣಿಗೆಯಲ್ಲಿ, ಕಲಾಪ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಮೊದಲು ಬಿ.ಕೆ.ಸಂಗಮೇಶ ಅಮಾನತು ಪ್ರಕರಣವನ್ನು ಕೈಗೆತ್ತಿಕೊಂಡಿತು. ಅಮಾನತು ಹಿಂಪಡೆಯುವಂತೆ ಒತ್ತಾಯಿಸಿ ಬಾವಿಗೆ ಇಳಿದು ಧರಣಿ ಶುರು ಮಾಡಿತು. ಅಮಾನತು ಹಿಂಪಡೆದರೆ ಕಾಂಗ್ರೆಸ್ ವಿಶೇಷ ಚರ್ಚೆಯಲ್ಲಿ ಭಾಗವಹಿಸಬಹುದೇನೋ ಎನ್ನುವ ಅನುಮಾನ ಇದರಿಂದ ಮೂಡಿತು. ಆದರೆ ಅಮಾನತು ಹಿಂಪಡೆದರೂ, ಈ ವಿಷಯದ ಮೇಲಿನ ಚರ್ಚೆಯಲ್ಲಿ ಕಾಂಗ್ರೆಸ್ ಭಾಗಿಯಾಗಲ್ಲ, ಧರಣಿ ಮುಂದುವರಿಯಲಿದೆ ಎಂದು ಪ್ರತಿಪಕ್ಷ ಸ್ಪಷ್ಟಪಡಿಸಿದ ಪರಿಣಾಮ ಏಕಕಾಲಕ್ಕೆ ಚುನಾವಣೆ ಕುರಿತ ಚರ್ಚೆಯನ್ನು ಕೈಬಿಟ್ಟು ಸದನ ಮುಂದೂಡುವ ನಿರ್ಣಯಕ್ಕೆ ಸ್ಪೀಕರ್ ಬಂದರು. ಒಂದು ರಾಷ್ಟ್ರ ಒಂದು ಚುನಾವಣೆ ಚರ್ಚೆಯು ನಿರ್ಣಾಯಕ ಅಂತ್ಯ ಕಾಣದೇ ಮುಗಿಯಿತು.